# ವಿದ್ಯಾಕಾಶಿ ಕರಿಯರ್ ಅಕಾಡೆಮಿ

**ಸಮಯ : 90 ನಿಮಿಷಗಳು**

ನೊಂದಣಿ ಸಂಖ್ಯೆ :

## ಪಿಎಸ್ಐ ಪತ್ರಿಕೆ – 1

**ಪ್ರಶ್ನೆಗಳು**

**ಅಂಕಗಳು : 100**

**ಪ್ರಬಂಧ, ಭಾಷಾಂತರ & ಸಾರಾಂಶ ಬರವಣಿಗೆ,**

ಹೆಸರು :

ಮೊಬೈಲ್ ನಂ :

30-01-2021

## ಭಾಗ – I

**ಈ ಕೆಳಕಂಡ ಯಾವುದಾದರೂ ಒಂದು ವಿಷಯಕ್ಕೆ 600 ಪದಗಳು ಮೀರದಂತೆ ಪ್ರಬಂಧವನ್ನು ಬರೆಯಿರಿ.**

1. ಕಾನೂನು ಸುವ್ಯವಸ್ಥೆಯಲ್ಲಿ ಪೊಲೀಸ್ ಪಾತ್ರವನ್ನು ಕುರಿತು ವಿವರಿಸಿ

ಅಥವಾ

2. ಕರ್ನಾಟಕ & ಮಹಾರಾಷ್ಟ್ರ ಗಡಿವಿವಾದ ಹಾಗೂ ಮಹಾಜನ ಆಯೋಗದ ವರದಿಯನ್ನು ಕುರಿತು ವಿಮರ್ಶಾತ್ಮಕವಾಗಿ ಚರ್ಚಿಸಿರಿ

ಅಥವಾ

3. ಪ್ರವಾಸೋದ್ಯಮದ ಮಹತ್ವ ದೇಶದ ಆರ್ಥಿಕತೆಯಲ್ಲಿ ಪ್ರವಾಸಿಗರ ಪಾತ್ರ.

ಅಥವಾ

4. ಸೈಬರ್ ಅಪರಾಧ

ಅಥವಾ

5. ಜಾಗತಿಕ ತಾಪಮಾನ

# ಭಾಗ – II

**II.** ಈ ಕೆಳಕಂಡ ಸಾರಾಂಶವನ್ನು ಕನ್ನಡದಿಂದ ಇಂಗ್ಲೀಷಗೆ ಭಾಷಾಂತರಿಸಿ.

**Translate the following paragraph from Kannada to English.**

ಸುಪ್ರಸಿದ್ಧ ಗಿರಿಧಾಮ ನಂದಿ ಬೆಟ್ಟ ತಪ್ಪಲಲ್ಲಿರುವ ಪುಟ್ಟ ಪಟ್ಟಣ ನಂದಿ. ಇದು ಬೆಂಗಳೂರಿನ ಈಶಾನ್ಯಕ್ಕೆ ಸುಮಾರು 60 ಕಿ.ಮೀ ದೂರದಲ್ಲಿದೆ. ಭೋಗನಂದೀಶ್ವರನ ಹೆಸರಲ್ಲಿ ಜನಪ್ರಿಯವಾದ ಪುರಾತನ ಶಿವ ದೇವಾಲಯದಿಂದ ಈ ಪಟ್ಟಣ ಪ್ರಸಿದ್ಧಿ.

ಇಂದು ನಾವು ಕಾಣುವಂತೆ ಈ ದೇವಾಲಯ ಸಂಯುಕ್ತ ಶೈಲಿಯ ವಾಸ್ತುಶಿಲ್ಪ ಹೊಂದಿದೆ. ಚೋಳರು, ಹೊಯ್ಸಳರು, ವಿಜಯನಗರ ದೊರೆಗಳು ಮತ್ತು ಮಧ್ಯಯುಗದ ಪಾಳೆರಗಾರರು ಎಲ್ಲರೂ ಈ ದೇವಾಲಯದ ನಿರ್ಮಾಣಕ್ಕೆ ಕೊಡುಗೆ ನೀಡಿದ್ದಾರೆ. ಇದು 8 ನೇ ಶತಮಾನಕ್ಕೆ ಸೇರಿದ ದಕ್ಷಿಣ ಭಾರತೀಯ ವಾಸ್ತುಶಿಲ್ಪದ ಮಾದರಿಯಾಗಿ ಕಲೆ ಮತ್ತು ಪುರಾತತ್ವಶಾಸ್ತ್ರದ ವಿದ್ಯಾರ್ಥಿಗಳಿಗೆ ಹೆಚ್ಚಿನ ಆಸಕ್ತಿ ಮೂಡಿಸುವಂತಿದೆ. ಜೊತೆಗೆ ಸುದೈವವಶಾತ್ ಇದನ್ನು ಉತ್ತಮ ರೀತಿಯಲ್ಲಿ ಸಂಕ್ಷಿಸಲಾಗಿದ್ದು ಸುಸ್ಥಿತಿಯಲ್ಲಿದೆ. ಇದು ರಾಜ್ಯದ ಈ ಭಾಗದಲ್ಲಿರುವ ದ್ರಾವಿಡ ದೇವಾಲಯಗಳಲ್ಲೇ ಅತ್ಯಂತ ಅಲಂಕಾರ ಭೊಯಿಷ್ಠವಾದ ದೇವಾಲಯಗಳಲ್ಲೊದೆಂದು ಪರಿಗಣಿಸಲಾಗಿದೆ.

ದೇವಾಲಯದ ಅಂಗಳದಲ್ಲಿ ಹಾಗೂ ಸುತ್ತಮುತ್ತ ಚೋಳರ ಕಾಲದ ಅನೇಕ ಶಾಸನಗಳನ್ನು ಕಾಣಬಹುದು. ಒಂದು ಶಾಸನದ ಪ್ರಕಾರ ಇಲ್ಲಿ ಮೂಲ ಶಿವ ದೇವಾಲಯವನ್ನು ಕ್ರಿ.ಶ. 804 ರಲ್ಲಿ ಬನ ದೊರೆ ವಿಧ್ಯಾಧರನ ರಾಣಿ ರತ್ನಾವಳಿ ನಿರ್ಮಿಸಿದಳೆಂದು ತಿಳಿದುಬರುತ್ತದೆ . ರಾಷ್ಟ್ರಕೂಟ ದೊರೆ ಗೋವಿಂದ ದೇವಾಲಯಕ್ಕೆ ಹಲವಾರು ದಾನಗಳನ್ನು ಮಾಡಿದ ಬಗ್ಗೆ ತಾಮ್ರ ಶಾಸನವೊಂದರಲ್ಲಿ ಉಲ್ಲೇಖವಿದೆ. 9ನೇ ಶತಮಾನಕ್ಕೆ ಸೇರಿದ ಒಂದು ಶಾಸನದ ನೊಳಂಬ ದೊರೆ ನೊಳಂಬಾಧಿರಾಜ ಮತ್ತು ಮೂರು ದೇವಾಲಯಗಳ ವಿವರಗಳ ದಾಖಲೆ ಇದೆ. ಈ ಶಾಸನಗಳು ಹಾಗು ವಾಸ್ತುಶೈಲಿಯನ್ನು ಆಧಾರವಾಗಿಟ್ಟುಕೊಂಡು ಹೆಚ್ಚುವರಿ ನಿರ್ಮಾಣಗಳನ್ನು 10 ನೇ ಶತಮಾನದಲ್ಲಿ ಮಾಡಲಾಗಿರಬಹುದು ಎಂದು ನಿಷ್ಕರ್ಷಿಸಲಾಗಿದೆ.

ವಿದ್ಯಾಕಾಶಿ ಕರಿಯರ್ ಅಕಾಡೆಮಿ

# ಭಾಗ – III

**III. ಈ ಕೆಳಕಂಡ ಸಾರಾಂಶವನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸಿ.**

**Translate the following paragraph from English to Kannada.**

Tulasidas's imaginary covers a vast range. No poet of medieval period - not even his great contemporary Surdas - can Vie with Tulasidas in respect of the infinite variety of imagery employed by him . He has collected his images from peasant life , court life , priestly environments, rural and civic life, philosophical treatises, literary classics, mythological works and folk literature.

His poetry is vast gallery of all kinds of images ranging from exquisite miniature paintings to large frescoes. Normally he likes simple and integrated images, but is quite capable of creating complex imagery as well. What he seems to abhor is a truncated image of which We can hardely search out a single example. His whole poetic creation is an endless endeavor to give a concrete tangible from to the abstract-to impart physical charms and mental qualities of human personality to an absolute concept.

# ಭಾಗ – IV

**II.** ಈ ಕೆಳಕಂಡ ವಿಷಯವನ್ನು ಸಂಕ್ಷೇಪಿಸಿ. 1/3 ಕ್ಕಿಂತ ಮೀರದಂತೆ ಬರೆಯಿರಿ.

ಒಂದು ದಿನ ಒಂದು ಹೊಟ್ಟೆ ಬಾಕ ತೊಳ ಮಾಂಸವನ್ನು ಗಬಗಬನೆ ಬಾಯಿಗೆ ತುರುಕಿಕೊಂಡು ಅಗಿಯದೇ ಹಾಗೇ ನುಂಗುತ್ತಿತ್ತು, ಆಗ ಮೂಳೆಯ ಚೂರು ಅದರ ಗಂಟಲಲ್ಲಿ ಸಿಕ್ಕಿಕೊಂಡಿತು. ಅದರಿಂದಾಗಿ ಆ ತೋಳ ತುಂಬಾ ಸಂಕಟಪಟ್ಟಿತು. ಕಣ್ಣಿನಲ್ಲಿ ನೀರು ತಂದುಕೊಂಡಿತು. ಯಾರಾದರೂ ತನ್ನ ಗಂಟಲಲ್ಲಿ ಸಿಲುಕಿರುವ ಮೂಳೆಯನ್ನು ತೆಗೆದು ಜೀವ ಉಳಿಸಿ ಎಂದು ಬೇಡಿಕೊಂಡಿತು. ಆದರೆ ತೋಳದ ಮಾತಿಗೆ ಕಾಡಿನ ಪಶು ಪಕ್ಷಿಗಳ ಮನಸ್ಸು ಕರಗಲಿಲ್ಲ. ಕೊನೆಗೆ ಕೊಕ್ಕರೆಯೊಂದು ಅಯ್ಯೋ ಎನ್ನುತ್ತಾ, ತೋಳದ ಬಳಿ ಬಂತು ತೋಳಪ್ಪ ದೊಡ್ಡದಾಗಿ ಬಾಯಿ ತೆಗೆ ಎಂದಿತು. ತೋಳ ಬಾಯಿ ತೆರೆದು ಕಣ್ಣು ಮುಚ್ಚಿಕೊಂಡಿತು. ಆಗ ಕೊಕ್ಕರೆ ತನ್ನ ಉದ್ದವಾದ ಕೊಕ್ಕಿನಲ್ಲಿ ಗೆಣುದ್ದದ ಮರದ ತುಂಡೊಂದನ್ನು ತೆಗೆದುಕೊಂಡು ತೋಳದ ಬಾಯಿಗೆ ಅಡ್ಡಲಾಗಿ ಇಟ್ಟಿತು. ನಂತರ ತನ್ನ ಕೊಕ್ಕು ಚಾಚಿ ಅದರ ಬಾಯಿಯೊಳಗಿದ್ದ ಮೂಳೆಯ ಚೂರನ್ನು ಹೊರ ತೆಗೆದು ತೋಳಕ್ಕೆ ತೋರಿಸಿತು. ಆ ಬಳಿಕ ತೋಳದ ಬಾಯಿಯಲ್ಲಿ ಸಿಕ್ಕಿಸಿದ್ದ ಕಡ್ಡಿಯನ್ನು ದೂಡಿತು. ಕಡ್ಡಿ ಕೆಳಗೆ ಕಳಚಿ ಬೀಳುವುದರೊಳಗೆ ತೋಳ ಕಟ್ಟಕನೇ ಬಾಯಿ ಮುಚ್ಚಿತು. ಸದ್ಯ ಬಾಯಯೊಳಗೆ ಕಡ್ಡಿಯಿಟ್ಟಿದ್ದು ಒಳ್ಳೆಯದಾಯಿತು ಎಂದು ಕೊಳ್ಳುತ್ತಲೇ ಕೊಕ್ಕರೇ ತೋಳವನ್ನು ಉದ್ದೇಶಿಸಿ ಹೇಳಿತು. ನೀನು ಹೇಳಿದಂತೆ ಬಹುಮಾನವನ್ನು ಕೊಟ್ಟರೆ ನಾನಿನ್ನು ಹೊರಡುವೆ ಎಚಿದಿತು. ಆಗ ತೋಳ ನಗುತ್ತಾ ನಿನಗೆ ಬಹುಮಾನವೇ ಯಾವ ಕಾರಣಕ್ಕೆ ಕೊಡಲಿ ನಾನು? ನನ್ನ ಬಾಯಿಯೊಳಗೆ ನಿನ್ನ ಕೊಕ್ಕನ್ನು ಇಟ್ಟಾಗ ಅದನ್ನು ಕಡಿಯದೇ ಹಾಗೇ ಬಿಟ್ಟೇನಲ್ಲ ಅದಕ್ಕಿಂತಲೂ ಬೇರೆ ಬಹುಮಾನ ಬೇಕೆ ಎಚಿದಿತು. ಕೊಕ್ಕೆರೆ ಪೆಚ್ಚು ಮುಖಮಾಡಿಕೊಂಡು ತನ್ನ ಗೂಡಿಗೆ ಹಾರಿ ಹೊಯಿತು.

ವಿದ್ಯಾಕಾಶಿ ಕರಿಯರ್ ಅಕಾಡೆಮಿ